ಅಸಲು ದಾವಾ ನಂ.135/2017

ಡಿ.ಡಬ್ಲೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 16-03-2019

**<u>ಪಾಟೀ ಸವಾಲು</u>**- ಶ್ರೀ ಎಂ.ಆರ್.ಸಿ ವಕೀಲರಿಂದ

ನಾನು 10 ನೇ ತರಗತಿವರೆಗೆ ಓದಿದ್ದೇನೆ. ನಾನು ಹುಟ್ಟಿದ ದಿಃ 16-04-1995. 2 ನೇ ವಾದಿ ಹುಟ್ಟಿದ ದಿನಾಂಕ ನೆನಪಿಲ್ಲ, ಆದರೆ ನನಗಿಂತ 1 ವರ್ಷ ಚಿಕ್ಕವನು. ನಾವು ಹುಟ್ಟುವುದಕ್ಕೂ ಮುನ್ನವೇ ನನ್ನ ತಂದೆ, ಚಿಕ್ಕಪ್ಪ ಮತ್ತು ನನ್ನ ತಂದೆಯ ತಂಗಿಯರು ಕುಟುಂಬದ ಸ್ವತ್ತುಗಳನ್ನು ಹಿಸ್ಸೆ ಮಾಡಿಕೊಂಡಿದ್ದರು. ಹಿಸ್ಸೆಯನ್ನು ನ್ಯಾಯಾಲಯದ ಮುಖಾಂತರ ಪಡೆದಿರುತ್ತಾರೆ. ನಾನು ಬೆಂಗಳೂರಿನಲ್ಲಿ 7-8 ವರ್ಷಗಳಿಂದ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ತಾಯಿ ಮೃತ ಪಟ್ಟು 10 ವರ್ಷಗಳಾಗಿದೆ. ನನ್ನ ತಾಯಿ ಮೃತಪಟ್ಟಾಗ ನನಗೆ 10 ವರ್ಷ ವಯಸ್ಸು. ನನ್ನ ತಾಯಿ ತೀರಿಕೊಂಡ ನಂತರ ನನ್ನ ತಂದೆ ನಮ್ಮನ್ನು ಪಾಲನೆ ಪೋಷಣೆ ಮಾಡಿಲ್ಲ ನನ್ನ ತಾತನೊಂದಿಗೆ ಇರುತ್ತೇವೆ. ಓಬಳಾಪುರ ನನ್ನ ತಾತನ ಊರು. ಗೂರಮಾರನಹಳ್ಳಿಯಲ್ಲಿ ನಾನು 10 ನೇ ತರಗತಿವರೆಗೆ ಓದಿದ್ದೇನೆ. ಗೂರಮಾರನಹಳ್ಳಿಯಿಂದ ಜನಿವಾರಕ್ಕೆ 2 ಕಿ.ಮೀ ದೂರವಾಗುತ್ತದೆ. ನಾನು ನನ್ನ ತಮ್ಮ 1 ರಿಂದ 7 ನೇ ತರಗತಿವರೆಗೆ ಜನಿವಾರದಲ್ಲಿ ಓದಿದ್ದೇವೆ, 8 ರಿಂದ 10 ನೇ ತರಗತಿವರೆಗೆ ಗೂರಮಾರನಹಳ್ಳಿಯಲ್ಲಿ ಓದಿರುತ್ತೇವೆ. ನನ್ನ ತಂದೆ ನಮ್ಮನ್ನು ಮತ್ತು ನನ್ನ ತಾಯಿಯನ್ನು ನಿಗಾವಣೆ ಮಾಡುತ್ತಿರಲಿಲ್ಲ ಎಂದು ಜೀವನಾಂಶ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಹಾಕಿರುವುದಿಲ್ಲ ಮತ್ತು ಪೋಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ. ನನ್ನ ತಂದೆ ಜೂಜಾಡುತ್ತಿದ್ದರು ಮತ್ತು ಮಧ್ಯಪಾನ ಮಾಡುತ್ತಿದ್ದ ಬಗ್ಗೆ ಪೋಲೀಸರಿಗೆ ನಾವು ದೂರು ನೀಡಿಲ್ಲ. ನಾನು ನನ್ನ ತಾತನ ಮನೆಯಲ್ಲಿ ಇದ್ದುದರಿಂದ ನನ್ನ ತಂದೆ ಯಾವಾಗಿನಿಂದ ಜೂಜಾಡುತ್ತಿದ್ದರು ಗೊತ್ತಿಲ್ಲ. ನಮ್ಮ ತಂದೆ ಎಷ್ಟು ಸಾಲ ಮಾಡಿದ್ದರು ನನಗೆ ಗೊತ್ತಿಲ್ಲ. ಸರ್ವೆ ನಂ.5/3 ರಲ್ಲಿ 16.5 ಗುಂಟೆ, ಸರ್ವೆ ನಂ. 68/2 ರಲ್ಲಿ 14 ಗುಂಟೆ, 25/2 ರಲ್ಲಿ 20 ಗುಂಟೆ, 25/2 ರಲ್ಲಿ 14.5 ಗುಂಟೆ, 25/4 ರಲ್ಲಿ 10.5 ಗುಂಟೆ ಸ್ವತ್ತು ನಮ್ಮ ಕುಟುಂಬಕ್ಕೆ ಇದೆ. ಸದರಿ ಜಮೀನಿನಲ್ಲಿ ತೆಂಗಿನ ಮರಗಳಿವೆ. ತೆಂಗಿನ ಮರಗಳು ಚಿಕ್ಕಮರಗಳಾಗಿರುವುದರಿಂದ ಇನ್ನೂ ಫಸಲು ಬರುತ್ತಿಲ್ಲ. ಎಲ್ಲಾ ಸ್ವತ್ತುಗಳಲ್ಲಿಯೂ ನನ್ನ

ತಂದೆ ವ್ಯವಸಾಯ ಮಾಡುತ್ತಿದ್ದಾರೆ. ದಾವಾ ಐಟಂ ನಂ.4 ರಲ್ಲಿರುವ ಹೊಸಾ ಆರ್.ಸಿ.ಸಿ ಮನೆಯನ್ನು ನನ್ನ ಚಿಕ್ಕಪ್ಪ ಕಟ್ಟಿದ್ದಾರೆ. ದಾವಾ ಐಟಂ ನಂ.4 ರಲ್ಲಿ 10 ಗುಂಟೆಯನ್ನು ನನ್ನ ತಂದೆ ದಿಃ 02-05-2012 ರಂದು ಮನೆಯನ್ನು ಕಟ್ಟಲು ಮತ್ತು ನಮ್ಮಗಳ ಪಾಲನೆ ಪೋಷಣೆಗೆ ಮಾಡಿರುವ ಸಾಲ ತೀರಿಸಲು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತಿನ ಪಕ್ಕದಲ್ಲಿ ನನ್ನ ಚಿಕ್ಕಪ್ಪ ಆರ್.ಸಿ.ಸಿ ಮನೆ ಕಟ್ಟಿದ್ದಾರೆ. ನನ್ನ ತಾಯಿ ಕ್ಯಾನ್ಸರ್ ಖಾಯಿಲೆಯಿಂದ ತೀರಿಕೊಂಡಿದ್ದಾರೆ. ನನ್ನ ತಾಯಿ 2 ವರ್ಷಗಳಿಂದ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದರು. ನನ್ನ ತಂದೆ ನನ್ನ ತಾಯಿಯ ಖಾಯಿಲೆಗೋಸ್ಕರ ಸಾಕಷ್ಟು ಹಣ ಖರ್ಚು ಮಾಡಿ ಆಸ್ಪತ್ರೆಗೆ ತೋರಿಸಿದ್ದರು ಎಂದರೆ ಸರಿಯಲ್ಲ, ನಮ್ಮ ವಿಧ್ಯಾಭ್ಯಾಸದ ಖರ್ಚು ಮತ್ತು ಯೋಗಕ್ಷೇಮವನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ ತಂದೆ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. 2 ನೇಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತಿನ ಬೆಲೆಯು ಇತ್ತೀಚೆಗೆ ಜಾಸ್ತಿಯಾಗಿದ್ದು ಸದರಿ ಸ್ವತ್ತನ್ನು ಲಪಟಾಯಿಸಲು ನನ್ನ ತಂದೆ ಮತ್ತು ನಾನು ಷರೀಕಾಗಿ 2 ನೇ ಪ್ರತಿವಾದಿ ವಿರುದ್ಧ ಈ ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತು ಚನ್ನರಾಯಪಟ್ಟಣ ಟೌನಿಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಚನ್ನರಾಯಪಟ್ಟಣ ಟೌನಿಂದ ಸದರಿ ಸ್ವತ್ತು 2 ಕಿ.ಮೀ ದೂರವಿದೆ. 2 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುವ ಸ್ವತ್ತಿನ ಸುತ್ತಲೂ ತಂತಿ ಬೇಲಿ ಹಾಕಿದ್ದಾರೆ ಎಂದರೆ ಸರಿ. ಹೆಚ್ಚು ಹಣ ಖರ್ಚು ಮಾಡಿ 2 ನೇ ಪ್ರತಿವಾದಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ 2 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಿರುವ ಉದ್ದೇಶ ನಮ್ಮ ಮತ್ತು ನಮ್ಮ ಕುಟಂಬದ ಅಭಿವೃದ್ದಿಗಾಗಿ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯಿಂದ ಸದುದ್ದೇಶದಿಂದ ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾವು ಹುಟ್ಟುವುದಕ್ಕಿಂತ ಮೊದಲೇ ನನ್ನ ತಂದೆ ಅವರ ಕುಟುಂಬದಿಂದ ಹಿಸ್ಸೆ ಪಡೆದಿದ್ದು ಅದು ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ ಷರೀಕಾಗಿ ಸುಳ್ಳು ದಾವಾ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ರ 10 ಗುಂಟೆ ಸ್ವತ್ತನ್ನು 2 ನೇ ಪ್ರತಿವಾದಿಯು ಸದುದ್ದೇಶದಿಂದ ಕ್ರಯಕ್ಕೆ ಪಡೆದಿದ್ದು ಸದರಿ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು , ಅಧಿಕಾರ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ